9.12.24
4_0_154

**ಕರ್ನಾಟಕ ವಿಧಾನ ಪರಿಷತ್ತು**
**(ಶೂನ್ಯ ವೇಳೆಯಲ್ಲಿ ವಿಷಯ (ದಿನಾಂಕ: 09.12.2024))**

**ಶ್ರೀ.ಸಿ.ಟಿ.ರವಿ, ಕರ್ನಾಟಕ ವಿಧಾನ ಪರಿಷತ್ತು ಸದಸ್ಯರು, ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಮತ್ತು ನವಜಾತ ಶಿಶುಗಳ ಮರಣ ಪ್ರಮಾಣ ದಿನೇ ದಿನೆ ಹೆಚ್ಚುತ್ತಿರುವುದು ಆಘಾತಕಾರಿ ಸಂಗತಿಯಾಗಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿರುವ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕಳೆದ 11 ತಿಂಗಳಲ್ಲಿ ರಾಜ್ಯದ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ವಿವಿಧ ಕಾರಣಕ್ಕೆ 111 ನವಜಾತ ಶಿಶುಗಳು ಮೃತಪಟ್ಟಿದ್ದರೆ, ಇತ್ತೀಚೆಗೆ ಬಳ್ಳಾರಿಯ ಸರ್ಕಾರಿ ಆಸ್ಪತ್ರೆ ಮತ್ತು ಬಿಮ್ಸ್‌ನಲ್ಲಿ ನಡೆದ ಬಾಣಂತಿಯರ ಸಾವುಗಳೂ ಸೇರಿದಂತೆ ಒಟ್ಟು 28 ಬಾಣಂತಿಯರು ಮೃತ ಪಟ್ಟಿರುವುದು ಮನಕಲುಕುವ ಘಟನೆಗಳಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಸಂಭವಿಸಿರುವ ಬಾಣಂತಿಯರ ಸಾವಿಗೆ ಕಳಪೆ ಗುಣಮಟ್ಟದ ಐ.ವಿ (ಇಂಟ್ರಾವೆನಸ್ರ್ಾವಣ) ಗ್ಲೂಕೋಸ್ ಕಾರಣ ಎಂದು ಷರಾ ಬರೆದು ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿ ಕೊಂಡಿದೆ. ಬಳ್ಳಾರಿಯ ಘಟನೆಗೆ ಐ.ವಿ.) ಗ್ಲೂಕೋಸ್ ಕಾರಣವೆಂದಾದರೆ, ದಾವಣಗೆರೆ ಸೇರಿದಂತೆ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಸಂಭವಿಸಿರುವ ನವಜಾತಶಿಶುಗಳು ಹಾಗೂ ಬಾಣಂತಿಯರ ಸಾವಿಗೆ ಕಾರಣರಾರು. ಆಗತಾನೆ ಕಣ್ಣು ಬಿಟ್ಟ ಶಿಶುಗಳು ಯಾರದೋ ದುಡ್ಡಿನ ವ್ಯಾಮೋಹದಿಂದ ಮತ್ತು ಸರ್ಕಾರದ ನಿರ್ಲಕ್ಷ್ಯದಿಂದ ಇಂದು ಅನಾಥವಾಗಿದ್ದು, ಆ ಶಿಶುಗಳಿಗೆ ಆಸರೆ ಯಾರು ಎನ್ನುವ ಪ್ರಶ್ನೆಗೆ ಸರ್ಕಾರ ಉತ್ತರಿಸಬೇಕಿದೆ. ಸರ್ಕಾರವೇ ಮೆಡಿಕಲ್ ಮಾಫಿಯಾ ಜೊತೆಗೆ ಕೈಜೋಡಿಸಿರುವ ಕಾರಣ ಈ ಸಾವುಗಳು ಸಂಭವಿಸುತ್ತಿರುವುದಾಗಿ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ದೊರೆಯುತ್ತಿರುವ ಚಿಕಿತ್ಸೆಯ ಬಗ್ಗೆ ಪ್ರಶ್ನೆ ಮೂಡಿದ್ದು, ಜನರು ಆತಂಕಗೊಳ್ಳುವಂತೆ ಮಾಡಿದೆ. ಸರ್ಕಾರ ತಕ್ಷಣ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಭವಿಸುತ್ತಿರುವ ಬಾಣಂತಿಯರ ಹಾಗೂ ನವಜಾತಶಿಶುಗಳ ಸಾವಿನ ಪ್ರಕರಣವನ್ನು ತಜ್ಞರನ್ನೊಳಗೊಂಡ ಉನ್ನತಮಟ್ಟದ ತನಿಖೆಗೆ ಒಳಪಡಿಸಬೇಕು ಮತ್ತು ಕಳಪೆ ಔಷಧ ಪೂರೈಸಿರುವ ಕಂಪನಿ ವಿರುದ್ಧ ತಕ್ಷಣ ಕ್ರಮಕೈಗೊಳ್ಳುವ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ :-**

ರಾಜ್ಯದ ವಿವಿಧ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಗರ್ಭಿಣಿ ಮತ್ತು ಬಾಣಂತಿಯರ ಸಾವು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಗರ್ಭಿಣಿ ಮತ್ತು ಬಾಣಂತಿಯರ ಸಾವುಗಳನ್ನು Maternal Mortality Ratio (MMR) ಎಂಬ ಸೂಚ್ಯಂಕವಿರುತ್ತದೆ. ಈ ಅನುಪಾತವು ಗರ್ಭಿಣಿ ಮತ್ತು ಬಾಣಂತಿಯರ ಸಾವುಗಳನ್ನು 1 ಲಕ್ಷ ಜೀವಂತ ಜನನಗಳಿಗೆ ಅಳೆಯಲಾಗುತ್ತದೆ.

ಭಾರತ ಸರ್ಕಾರದ 2018-20ರ ಸಾಲಿಗೆ ಬಿಡುಗಡೆ ಮಾಡಿದ ವರದಿಯಲ್ಲಿ ಕರ್ನಾಟಕ ರಾಜ್ಯದ ತಾಯಿ ಮರಣ ಪ್ರಮಾಣದ ದರವು 69 ಇರುತ್ತದೆ.ಭಾರತಾದ್ಯಂತ ಈ ಅನುಪಾತವು 97 ಆಗಿರುತ್ತದೆ. ಕರ್ನಾಟಕ ರಾಜ್ಯದ ತಾಯಿ ಮರಣದ ಪ್ರಮಾಣವು ಭಾರತದ ಇತ್ತೀಚಿನ ವರದಿಯಂತೆ ಇತರೆ ರಾಜ್ಯಗಳಿಗೆ ಹೋಲಿಸಿದ್ದಲ್ಲಿ 8ನೇಯ ಸ್ಥಾನದಲ್ಲಿರುತ್ತದೆ.

ರಾಜ್ಯದಲ್ಲಿ ಕಳೆದ 3 ವರ್ಷಗಳ 2021-22 2022-23 ಮತ್ತು 2023-24 ತಾಯಿ ಮರಣ ಪ್ರಮಾಣಗಳ ವರದಿಯನ್ನು ವಿಶ್ಲೇಷಿಸಿದಾಗ ರಾಜ್ಯದ Maternal Mortality Ratio (MMR) ಸೂಚ್ಯಂಕವು 64 ಇರುತ್ತದೆ. ಕಳೆದ 20 ದಿನಗಳಿಂದ ಈ ರೀತಿಯ ಅಸಹಜ ತಾಯಿ ಮರಣಗಳು ಸಂಭವಿಸಿರುವುದು ಕಂಡುಬಂದಿರುವುದಿಲ್ಲ. ಇತರೆ ಎಲ್ಲಾ ಬಾಣಂತಿಯರ/ತಾಯಂದಿರಮರಣಗಳ ಬಗ್ಗೆಕುಲಂಕುಶವಾಗಿ ವಿಚಾರಣೆಯನ್ನು ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದ್ದು ಸೂಕ್ತ ಕಾರಣವನ್ನು ಕಂಡುಹಿಡಿದು ಮರಣ ಪ್ರಕರಣಗಳ ಸಂಖ್ಯೆಯನ್ನು ತಡೆಗಟ್ಟುವಲ್ಲಿ ಕ್ರಮವಹಿಸಲಾಗುತ್ತಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ತಜ್ಞವೈದ್ಯರ ತಂಡವು ಬಳ್ಳಾರಿ ಜಿಲ್ಲೆಗೆ ಭೇಟಿ ಕೊಟ್ಟು ಅಲ್ಲಿ ಸಂಭವಿಸಿದ ಸಾವುಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ಆಸ್ಪತ್ರೆಯ ವೈದ್ಯರ ಅಥವಾ ಸಿಬ್ಬಂದ್ದಿಗಳ ನಿರ್ಲ್ಯಕ್ಷ್ಯತನವು ಕಂಡು ಬಂದಿರುವುದಿಲ್ಲ.
ಕರ್ನಾಟಕ ರಾಜ್ಯದ ವೈದ್ಯಕೀಯ ಸರಬರಾಜು ನಿಗಮದಲ್ಲಿ (KSMSCL) ಖರೀದಿ ಪ್ರಕ್ರಿಯೆ ಮತ್ತು ಔಷಧಿಗಳನ್ನು ಬಳಕೆಗೆ ನೀಡುವ ಮೊದಲು ಪರೀಕ್ಷಿಸುವ ವಿಧಾನಗಳನ್ನು ಮತ್ತು ಪದ್ಧತಿಗಳನ್ನು ತನಿಖೆ ನಡೆಸಿ ತರಬಹುದಾದ ಬದಲಾವಣೆಗಳ ಬಗ್ಗೆ ವರದಿ ನೀಡಲು ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿರುತ್ತದೆ

**ನವಜಾತ ಶಿಶುಗಳಿಗೆ ಮರಣಗಳ ವಿಷಯಕ್ಕೆ ಸಂಬಂದಿಸಿದಂತೆ ಮಕ್ಕಳ ಆರೋಗ್ಯ ವಿಭಾಗದಿಂದ ಅನುಷ್ಠಾನದಲ್ಲಿರುವ ಕಾರ್ಯಕ್ರಮಗಳನ್ವಯ ಪ್ರತಿಸ್ಪಂದನೆ:**

ನವಜಾತ ಶಿಶುಗಳ ಮರಣಗಳನ್ನು ತಡೆಯಲು ವೈದ್ಯಕೀಯ ಮಹಾವಿದ್ಯಾಲಯಗಳ ಆಸ್ಪತ್ರೆಗಳನ್ನೊಳಗೊಂಡಂತೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳಿಗೆ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ಶಿಶುಮರಣಗಳ ಪ್ರಮಾಣವು ಕಡಿಮೆಯಾಗುತ್ತಿದ್ದು, ಮಾದರಿ ವ್ಯವಸ್ಥೆ 2020 (Sample Registration System-SRS)ರ ವರದಿಯನ್ವಯ ಕರ್ನಾಟಕ ರಾಜ್ಯದ ಸರಾಸರಿ ನವಜಾತ ಶಿಶುಮರಣ ದರವು 14 (ಪ್ರತಿ 1000 ಜೀವಂತ ಜನನಗಳಿಗೆ) ಇದ್ದು, ಭಾರತ ದೇಶದ ದರವು 20 ಇರುತ್ತದೆ.

ಕರ್ನಾಟಕವು ನವಜಾತ ಶಿಶು ಮರಣ ದರ ಪ್ರಮಾಣದ ಕಡಿತದ ವಿಷಯದಲ್ಲಿ ಸಾಧನೆ ಮಾಡಿದೆ. ರಾಜ್ಯವು ರಾಷ್ಟ್ರೀಯ ಆರೋಗ್ಯ ನೀತಿ 2025 ನಿಗಧಿಪಡಿಸಿದ ಗುರಿಯನ್ನು 5 ವರ್ಷ ಮುಂಚಿತವಾಗಿಯೇ ಸಾಧಿಸಿದೆ. ಎಲ್ಲ ರಾಜ್ಯಗಳಿಗೆ ರಾಷ್ಟ್ರೀಯ ಆರೋಗ್ಯ ನೀತಿ 2025 ರ ವೇಳೆಗೆ ನವಜಾತ ಶಿಶುಮರಣ ದರವನ್ನು 16 ಕ್ಕಿಂತ (ಪ್ರತಿ 1000 ಜೀವಂತ ಜನನಗಳಿಗೆ) ಕಡಿಮೆ ಸಾಧಿಸಲು ಗುರಿ ನಿಗಧಿಪಡಿಸಿದೆ. ಮಾದರಿ ವ್ಯವಸ್ಥೆ 2020 (Sample Registration System-SRS)ರ ವರದಿಯನ್ವಯ ಕರ್ನಾಟಕ ರಾಜ್ಯದ ನವಜಾತ ಶಿಶು ಮರಣ ದರವು ಪ್ರಸ್ತುತವಾಗಿ 14ಕ್ಕೆ (ಪ್ರತಿ 1000 ಜೀವಂತ ಜನನಗಳಿಗೆ) ಕಡಿತವಾಗಿರುತ್ತದೆ.

**ಮಕ್ಕಳ ಆರೋಗ್ಯ ವಿಭಾಗದಿಂದ ಕೈಗೊಂಡ ಉಪಕ್ರಮಗಳು:**

ನವಜಾತ ಶಿಶುಗಳ ಮರಣಗಳನ್ನು ಕಡಿಮೆ ಮಾಡಲು ಮತ್ತು ಆರೋಗ್ಯ ವೃದ್ಧಿಸಲು ರಾಜ್ಯದಲ್ಲಿ ವೈದ್ಯಕೀಯ ಸೇವೆಗಳಿಗಾಗಿ ಬಹುಹಂತದ ಸೌಲಭ್ಯ ಹಾಗೂ ವಿವಿಧ ಆರೋಗ್ಯ ಕಾರ್ಯಕ್ರಮಗಳು ಜಾರಿಯಲ್ಲಿದ್ದು, ವಿವರಗಳನ್ನು ಕೆಳಕಂಡಂತಿವೆ.

**ಆರೋಗ್ಯ ಸೇವೆಗಳು:**

A. ಸೌಲಭ್ಯ ಆಧಾರಿತ ಸೇವೆಗಳು
- ನವಜಾತ ಶಿಶು ಆರೈಕೆ ಕಾರ್ನರ್ (NBCC)
- ನವಜಾತ ಶಿಶು ಸ್ಥಿರೀಕರಣ ಘಟಕ (NBSU)
- ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU)
- ಕಾಂಗರೂ ಮದರ್ ಕೇರ್ ಮತ್ತು ಲ್ಯಾಕ್ಟೇಶನ್ ಕ್ಲಿನಿಕ್ (KMC & LC)
- ತಾಯಿಯ ಎದೆಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳು (CLMC)

B. ಸಮುದಾಯ ಆಧಾರಿತ ಸೇವೆಗಳು
- ಗೃಹ ಆಧಾರಿತ ನವಜಾತ ಶಿಶು ಆರೈಕೆ (HBNC).
- ಗೃಹ ಆಧಾರಿತ ಚಿಕ್ಕ ಮಕ್ಕಳ ಆರೈಕೆ (HBYC).

C. ಸಮುದಾಯ ಜಾಗೃತಿ ಕಾರ್ಯಕ್ರಮಗಳು
- ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF).
- ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS).
- ರಾಷ್ಟ್ರೀಯ ನವಜಾತ ಶಿಶು ಸಪ್ತಾಹ (NNW).
- ವಿಶ್ವ ಸ್ತನ್ಯಪಾನ ಸಪ್ತಾಹ (WBW).

D. ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ ತರಬೇತಿಗಳು
- ತಾಯಿಯ ಸಂಪೂರ್ಣ ವಾತ್ಸಲ್ಯ ಹಾಗೂ ಶಿಶು ಮತ್ತು ಚಿಕ್ಕ ಮಕ್ಕಳ ಪೋಷಣೆ (MAA-IYCF).
- ಸೌಲಭ್ಯ ಆಧಾರಿತ ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (F-IMNCI).
- ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (IMNCI).
- ಸೌಲಭ್ಯ ಆಧಾರಿತ ನವಜಾತ ಶಿಶು ಆರೈಕೆ (FBNC).
- ಚಿಕ್ಕ ಮಗುವಿಗೆ ಮನೆ ಆಧಾರಿತ ಆರೈಕೆ (HBYC)
- ನವಜಾತ ಸ್ಥಿರೀಕರಣ ಘಟಕ (NBSU)
- ನವಜಾತ ಶಿಶು ಸುರಕ್ಷಾ ಕಾರ್ಯಕ್ರಮ (NSSK)

E. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಉಚಿತ ಔಷಧಗಳು ಮತ್ತು ಪ್ರಯೋಗಾಲಯದ ಪರೀಕ್ಷೆಗಳು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಉಚಿತ ಸಾರಿಗೆ ರೆಫರಲ್ ಸೇವೆ

F. ನವಜಾತ ಶಿಶು ಆಂಬುಲೆನ್ಸ್ ಸೇವೆಗಳು

**ಸೌಲಭ್ಯ ಆಧಾರಿತ ಸೇವೆಗಳು:**

- **ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1ನೇ ಹಂತದ ಆರೈಕೆ**

ಹೆರಿಗೆಗಳನ್ನು ನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳುಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ನವಜಾತ ಶಿಶು ಆರೈಕೆ ಕೇಂದ್ರಗಳು (NBCC) ಕಾರ್ಯನಿರ್ವಹಿಸುತ್ತಿವೆ. ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಸುರಕ್ಷಾ ಕಾರ್ಯಕ್ರಮದಡಿ ತರಬೇತಿಯನ್ನು ನೀಡುವುದರ ಮೂಲಕ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಸೇವೆಯನ್ನು ಒದಗಿಸಲಾಗುತಿದೆ. ಏಪ್ರಿಲ್ 2024 ರಿಂದ ನವ್ಹೆಂಬರ- 2024 ರವರೆಗೆ 523757 ಜೀವಂತ ಜನನಗಳಿಗೆ ಅವಶ್ಯಕ ಸೇವೆ ನೀಡಲಾಗಿರುತ್ತದೆ (ವರದಿ : HMIS).

- **ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2ನೇ ಹಂತದ ಆರೈಕೆ**

ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU) ಕಾರ್ಯನಿರ್ವಹಿಸುತ್ತಿವೆ. ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರ/ಎಫ್.ಆರ್.ಯು ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಘಟಕಗಳಲ್ಲಿ ಜನನ ಸಮಯದಲ್ಲಿ ತೊಂದರೆಗೊಳಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಲಾಗುವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ ಹಾಗೂ ನವಜಾತ ಶಿಶುಗಳಲ್ಲಿ/ ಮಕ್ಕಳಲ್ಲಿ ಕಂಡುಬರುವ ಅತಿಸಾರ ಬೇದಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆಯನ್ನು ನೀಡಲಾಗುವುದು. ನವಜಾತ ಶಿಶು ಸ್ಥಿರೀಕರಣ ಘಟಕಗಳಲ್ಲಿ ಇಬ್ಬರು ತರಬೇತಿ ಹೊಂದಿದ ಶುಶ್ರೂಷಕರುಗಳನ್ನು ನಿಯೋಜಿಸಿದ್ದು ನವಜಾತ ಶಿಶುಗಳ ಆರೋಗ್ಯವನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಏಪ್ರಿಲ್ 2024 ರಿಂದ ನವ್ಹೆಂಬರ- 2024ರವರೆಗೆ ಒಟ್ಟು 16298 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ.87.6 ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ.

- **ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3ನೇ ಹಂತದ ಆರೈಕೆ**

ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಆಯ್ದ ಹೆಚ್ಚಿನ ಹೆರಿಗೆಗಳಾಗುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 50 SNCUಗಳು ಸ್ಥಾಪಿಸಲಾಗಿದೆ. 24×7 ಸೇವೆಗಳನ್ನು ಒದಗಿಸಲು ತರಬೇತಿ ಪಡೆದ ಮಕ್ಕಳ ತಜ್ಞರು, ವೈದ್ಯರು, ಶುಶ್ರೂಷಕರು ಮತ್ತು ಸಹಾಯಕ ಸಿಬ್ಬಂದಿಯಿಂದ SNCUಗಳನ್ನು ನಿರ್ವಹಿಸಲಾಗುತ್ತಿದೆ. 50 SNCUಗಳಲ್ಲಿ ಒಟ್ಟು 1138 ಹಾಸಿಗೆಗಳಿದ್ದು, ಏಪ್ರಿಲ್ 2024 ರಿಂದ ನವ್ಹೆಂಬರ- 2024 ರವರೆಗೆ 52386 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ. 86.9% ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ. ನವಜಾತ ಶಿಶುವಿಗೆ ಬೆಂಬಲ ಆರೈಕೆಯನ್ನು ಬಲಪಡಿಸಲು 40 SNCUಗಳಲ್ಲಿ ಕಾಂಗರೂ ಮದರ್ ಕೇರ್ (KMC) ward ಗಳು ಮತ್ತು ಹಾಲುಣಿಸುವ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ಕಡಿಮೆ ಜನನ ತೂಕದ ಶಿಶುಗಳ ಬದುಕುಳಿಯುವಿಕೆಯನ್ನು ಹೆಚ್ಚಿಸಲು ಆರಂಭಿಕ ಸ್ತನ್ಯಪಾನ ಮತ್ತು ಸಂಪೂರ್ಣ ಸ್ತನ್ಯಪಾನದ (exclusive breastfeeding) ಮಹತ್ವವನ್ನು ಪೋಷಕರಿಗೆ ತಿಳಿಸಿ ಕಾಂಗರೂ ಮಾದರಿ ಆರೈಕೆಯನ್ನು ನೀಡಲು ಉತ್ತೇಜಿಸುತ್ತಾರೆ.

- **ತಾಯಿಯ ಎದೆಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳು (CLMC):** ಸಮಗ್ರ ಹಾಲುಣಿಸುವಿಕೆ ನಿರ್ವಹಣಾ ಕೇಂದ್ರ (CLMC) ಆಸ್ಪತ್ರೆಯೊಳಗಿನ ಎಲ್ಲಾ ತಾಯಂದಿರಿಗೆ ಸಮಗ್ರ ಹಾಲುಣಿಸುವ ಬೆಂಬಲ ಮತ್ತು ನಿರ್ವಹಣೆಯನ್ನು ಒದಗಿಸುವ ಉದ್ದೇಶಕ್ಕಾಗಿ ರಾಜ್ಯದಲ್ಲಿ 8 ಆಸ್ಪತ್ರೆಗಳಲ್ಲಿ CLMC ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತವಾಗಿ, ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ, ಘೋಷಾ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ; ಲೇಡಿ ಗೋಶೆನ್ ಆಸ್ಪತ್ರೆ, DK; ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ; ಬೆಳಗಾವಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬೆಳಗಾವಿ, ಶಿವಮೊಗ್ಗ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಶಿವಮೊಗ್ಗ; ಕಲಬುರ್ಗಿ ಜಿಲ್ಲಾ ಆಸ್ಪತ್ರೆ, ಕಲಬುರ್ಗಿ ಇಲ್ಲಿ ಸ್ಥಾಪಿಸಲಾಗಿದ್ದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

**ಸಮುದಾಯ ಆಧಾರಿತ ಸೇವೆಗಳು:**

- **ಮನೆ ಆಧಾರಿತ ನವಜಾತ ಶಿಶು ಆರೈಕೆ (HBNC):** ಆಶಾ ಕಾರ್ಯಕರ್ತೆಯರು ಹೆರಿಗೆಯ ನಂತರದ ಮೊದಲ 42 ದಿನಗಳಲ್ಲಿ 6-7 ಬಾರಿ ನವಜಾತ ಶಿಶುವಿನ ಮನೆಗಳಿಗೆ ಭೇಟಿ ನೀಡುತ್ತಾರೆ. 40844 ಆಶಾ ಕಾರ್ಯಕರ್ತೆಯರಿಗೆ ಸಾಮಾನ್ಯ ನವಜಾತ ಶಿಶು ಕಾಯಿಲೆಗಳನ್ನು ಗುರುತಿಸಲು ಮತ್ತು ಸ್ತನ್ಯಪಾನ ಮತ್ತು ನವಜಾತ ಶಿಶುವಿನ ಆರೈಕೆಯ ಬಗ್ಗೆ ತಾಯಂದಿರಿಗೆ ಶಿಕ್ಷಣ ನೀಡಲು ತರಬೇತಿ ನೀಡಲಾಗಿದೆ. ನವಜಾತ ಶಿಶುವಿನ ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಅವರಿಗೆ ಅಗತ್ಯ ಉಪಕರಣಗಳು ಮತ್ತು ಔಷಧಿಗಳನ್ನು ಒಳಗೊಂಡಿರುವ ಕಿಟ್ ಅನ್ನು ಒದಗಿಸಲಾಗಿದೆ.
- **ಚಿಕ್ಕ ಮಕ್ಕಳಿಗಾಗಿ ಮನೆ ಆಧಾರಿತ ಆರೈಕೆ (HBYC):** HBYC ಕಾರ್ಯಕ್ರಮದಡಿ ಆಶಾ ಕಾರ್ಯಕರ್ತೆಯರು (3, 6, 9, 12 ಮತ್ತು 15 ನೇ ತಿಂಗಳುಗಳು) ಐದು ಮನೆ ಭೇಟಿಗಳನ್ನು ನೀಡಿ, ಮಕ್ಕಳ ಆರೋಗ್ಯದಲ್ಲಿ ನ್ಯೂನತೆ ಕಾಣಿಸಿದಲ್ಲಿ ಆ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವ ಕಾರ್ಯಕ್ರಮ ಅನುಷ್ಠಾನವಾಗಿದೆ. ರಾಜ್ಯಾದ್ಯಂತ 32476 ಆಶಾ ಕಾರ್ಯಕರ್ತೆಯರು HBYC ಅಡಿಯಲ್ಲಿ ತರಬೇತಿ ಪಡೆದಿದ್ದು ಎಲ್ಲಾ ಜಿಲ್ಲೆಗಳು ಏಪ್ರಿಲ್ 2023 ರಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

**ಸಮುದಾಯ ಜಾಗೃತಿ ಕಾರ್ಯಕ್ರಮಗಳು:**

- **ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF):** ಅತಿಸಾರ ನಿರ್ವಹಣೆಯ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸಲು IDCF ಪಾಕ್ಷಿಕವನ್ನು ಆಚರಿಸಲಾಗುತ್ತಿದೆ. ಸದರಿ ಪಾಕ್ಷಿಕಾಚರಣೆ ಸಂದರ್ಭದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತರು ಮತ್ತು ಪ್ರಾಥಮಿಕ ಆರೋಗ್ಯ ಶುಶ್ರೂಷಕರು ಗಳಂತಹ ಎಲ್ಲಾ ಮೊಂಚೂಣಿ ಕಾರ್ಯಕರ್ತರು ORS ಪೊಟ್ಟಣಗಳು ಮತ್ತು Zinc Sulphate ಮಾತ್ರೆಗಳ ಸಕ್ರಿಯ ಬಳಸುವಿಕೆ ಮತ್ತು ವಿತರಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಆರೋಗ್ಯ ಕಾರ್ಯಕರ್ತರು 5 ವರ್ಷದೊಳಗಿನ ಮಕ್ಕಳ ಮನೆಗಳಿಗೆ ಭೇಟಿ ನೀಡುತ್ತಾರೆ ಮತ್ತು ORS ದ್ರಾವಣ ತಯಾರಿಕೆ, ಮನೆಯಲ್ಲಿ

ಅತಿಸಾರ ನಿರ್ವಹಣೆ, ನೈರ್ಮಲ್ಯತೆ, ಕೈ ತೊಳೆಯುವ ತಂತ್ರಗಳ ಬಗ್ಗೆ ಪೋಷಕರಿಗೆ ಜಾಗೃತಿ ಮೂಡಿಸುತ್ತಾರೆ.

- **ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS):** ಕಡಿಮೆ ಜನನದ ತೂಕ, ಅಪೌಷ್ಟಿಕತೆ, ಒಳಾಂಗಣ ವಾಯುಮಾಲಿನ್ಯ, ರೋಗ ನಿರೋಧಕ ಶಕ್ತಿಯ ಕೊರತೆ, ನೈರ್ಮಲ್ಯದ ಕೊರತೆ ಮತ್ತು ಇತರ ಅನೇಕ ಸಾಮಾಜಿಕ-ಆರ್ಥಿಕ ಅಂಶಗಳಂತಹ ಅಪಾಯಕಾರಿ ಅಂಶಗಳ ಸಂಯೋಜನೆಯಿಂದ ಉಂಟಾಗುವ ಬಾಲ್ಯದ ನ್ಯುಮೋನಿಯಾ ಗುರುತಿಸುವಿಕೆ, ನಿರ್ವಹಣೆ ಮತ್ತು ಸೂಕ್ತ ರೆಫರಲ್ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಲು ನವೆಂಬರ್ 12 ರಿಂದ ಫೆಬ್ರವರಿ 28 ರವರೆಗೆ SAANS ಅಭಿಯಾನವನ್ನು ನಡೆಸಲಾಗಿರುತ್ತದೆ. ಆಶಾ ಕಾರ್ಯಕರ್ತರು ಮತ್ತು ಕ್ಷೇತ್ರ ಮಟ್ಟದ ಆರೋಗ್ಯ ಕಾರ್ಯಕರ್ತರು ಮನೆಗಳಿಗೆ ಭೇಟಿ ನೀಡಿ ಜಾಗೃತಿ ಚಟುವಟಿಕೆಗಳನ್ನು ನಡೆಸಿರುತ್ತಾರೆ.
- **ರಾಷ್ಟ್ರೀಯ ನವಜಾತ ಶಿಶು ಸಪ್ತಾಹ:** ಕರ್ನಾಟಕದಲ್ಲಿ 2016 ರಿಂದ ನವಜಾತ ಶಿಶು ಸಪ್ತಾಹವನ್ನು ಆಚರಿಸಲಾಗುತ್ತಿದೆ. ಇದು ನವಜಾತ ಶಿಶುಗಳ ಆರೈಕೆಗೆ ಪ್ರಾಮುಖ್ಯತೆಯನ್ನು ನೀಡಲು ಮತ್ತು ನವಜಾತ ಶಿಶುಗಳ ಆರೈಕೆ ಮತ್ತು ಸ್ತನ್ಯಪಾನವನ್ನು ಸುಧಾರಿಸುವ ಮಹತ್ವವನ್ನು ಒತ್ತಿಹೇಳುವ ಕಾರ್ಯಕ್ರಮವಾಗಿದೆ. ಇದನ್ನು ಪ್ರತಿ ವರ್ಷ ನವೆಂಬರ್ ಎರಡನೇ ವಾರದಲ್ಲಿ ಆಚರಿಸಲಾಗುತ್ತದೆ. ನವೆಂಬರ್ 2024 ರಲ್ಲಿ ಸೇವೆಯ ಗುಣಮಟ್ಟ ಸುಧಾರಿಸುವ ಸಂಬಂಧ ಎಲ್ಲಾ 50 SNCU ಗಳ MusQan ಮೌಲ್ಯಮಾಪನವನ್ನು ನಡೆಸಿ ಸೇವಾ ಗುಣಮಟ್ಟಾಟ ಸುಧಾರಿಸಲಾಗಿದೆ.
- **ವಿಶ್ವ ಸ್ತನ್ಯಪಾನ ಸಪ್ತಾಹ:** 2024 ಆಗಸ್ಟ್ ಮೊದಲ ವಾರದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಸ್ತನ್ಯಪಾನದ ಪ್ರಾಮುಖ್ಯತೆ ಮತ್ತು ಸ್ತನ್ಯಪಾನದಲ್ಲಿ ಪೋಷಕರ ಪಾತ್ರವನ್ನು ಒತ್ತಿಹೇಳಲು ವಿಶ್ವ ಸ್ತನ್ಯಪಾನ ಸಪ್ತಾಹವನ್ನು ರಾಜ್ಯದಾದ್ಯಂತ ಆಚರಿಸಲಾಗಿದೆ.

**ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ:**

- FBNC ತರಬೇತಿ ನಡೆಸಲು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಾಗಿದೆ.2023-24ರಲ್ಲಿ 12 ತರಬೇತಿ ತಂಡಗಳ ಮೂಲಕ ಒಟ್ಟು 289 ಶುಶ್ರೂಷಕರಿಗೆ ತರಬೇತಿ ನೀಡಲಾಗಿದೆ ಹಾಗೂ 2023-24ರಲ್ಲಿ ಒಟ್ಟು 245 ಶುಶ್ರೂಷಕರಿಗೆ ನವಜಾತ ಶಿಶುಗಳ ವೈದ್ಯಕೀಯ ಆರೈಕೆಗಾಗಿ ತರಬೇತಿ ನೀಡಲಾಗಿದೆ.
- IMNCI, F-IMNCI, NSSK, MAA-IYCF ತರಬೇತಿಗಳನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡಲಾಗಿದೆ.
- NBSU ತರಬೇತಿಗಳು ಮತ್ತು software ಏಕೀಕರಣ ತರಬೇತಿಗಳನ್ನು ನೀಡಿ ರಾಜ್ಯ ಮಕ್ಕಳ ಆರೋಗ್ಯ ವಿಭಾಗವು ನಡೆಸಲಾಗಿರುತ್ತದೆ.

**ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು ಯೋಜನೆಗಳು:**

ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK):ಅನಾರೋಗ್ಯದಿಂದ ಬಳಲುತ್ತಿರುವ ಶಿಶುಗಳ ಚಿಕಿತ್ಸೆಗಾಗಿ ಪೋಷಕರಿಂದ ಖರ್ಚು ಮಾಡುವುದನ್ನು ಕಡಿಮೆ ಮಾಡಲು JSSK ಕಾರ್ಯಕ್ರಮದಡಿ ಆರೋಗ್ಯ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನ ನೀಡುವ ಕಾರ್ಯಕ್ರಮವು ಅನುಷ್ಠಾನದಲ್ಲಿದೆ.

**ನವಜಾತ ಶಿಶುಗಳ ಆಂಬ್ಯುಲೆನ್ಸ್ ಸೇವೆಗಳು:**

ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಿನ ಚಿಕಿತ್ಸೆಗಾಗಿ ನವಜಾತ ಶಿಶುಗಳನ್ನು ಮೇಲ್ದರ್ಜೆ ಸೌಲಭ್ಯವುಳ್ಳ ಆಸ್ಪತ್ರೆಗೆ ಕರೆದೊಯ್ಯಲು ಮೈಸೂರು, ಬೆಂಗಳೂರು, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನವಜಾತ ಶಿಶುಗಳ ಆಂಬುಲೆನ್ಸ ಸೇವೆಗಳನ್ನು ಪ್ರಾರಂಭ ಮಾಡಲಾಗಿದೆ. ನವಜಾತ ಶಿಶುಗಳಿಗೆ ಪ್ರಯಾಣದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ವಿಶೇಷವಾಗಿ ಟ್ರಾನ್ಸ್‌ಪೋರ್ಟ್ ಇನ್ಕ್ಯುಬೇಟರ್, ಟ್ರಾನ್ಸ್ ಪೋರ್ಟ್ ವೆಂಟಿಲೇಟರ್, ಆಮ್ಲಜನಕ ಸಿಲೆಂಡರ್, ಸಿರಿಂಜ್ ಪಂಪ್, ಮಲ್ಟಿ-ಚಾನಲ್ ಮಾನಿಟರ್, ಪಲ್ಸ್ ಆಕ್ಸಿಮೀಟರ್, ಸೇರಿದಂತೆ ವಿಶೇಷ ಉಪಕರಣಗಳನ್ನು ಅಳವಡಿಸಲಾಗಿದೆ.

**ಆಕುಕ** 104 **ಎಸ್‌ಟಿಕ್ಯೂ**2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು